ಪಕ್ಷದ ನಾಯಕರು. ಚಾನೆಲ್ ಬದಲಾಯಿಸಿದ್ದೆ. ಆ ಚಾನೆಲ್‌ನಲ್ಲೂ ಅದೇ ಸುದ್ದಿ.

'ನೀಲಾಂಜನ...' ನಾನು ಕಿರುಚಿಕೊಂಡಿದ್ದೆ.

'ಯಾರದು ನೀಲಾಂಜನ...' ಜಾಸ್ಮಿನ್ ನನ್ನನ್ನು ಅಪ್ಪಿಕೊಂಡು ಕೇಳಿದ್ದಳು. ನನ್ನ ದೇಹ ನಡುಗುತ್ತಿತ್ತು. ಜೊತೆಗೆ ಹಗುರವೂ ಕೂಡ ಆಗುತ್ತಿತ್ತು. ಅಷ್ಟರಲ್ಲಿ ನನ್ನ ಫೋನ್ ರಿಂಗಾಗುತ್ತಿತ್ತು. ಗುರುತಿಲ್ಲದ ಸಂಖ್ಯೆ.

'ಹಲೋ' ಎಂದಿದ್ದೆ.

'ಹಲೋ ಯದುನಂದನಾ?...' ಗುಹೆಯೊಂದರ ಕತ್ತಲನ್ನು ಸೀಳಿಕೊಂಡು ಬಂದಂತಿತ್ತು ಧ್ವನಿ.

'ನಾನು ಧಾತುಸೇನ. ಟಿ.ವಿ.ಯಲ್ಲಿ ಸುದ್ದಿ ನೋಡಿದೆ. ಏನೋ **conspiracy** ಇದೆಯೆನಿಸುತ್ತಿದೆ. ನನಗ್ಯಾಕೋ ರಾಘವ ಪಂತುಲು ಮೇಲೆ ಅನುಮಾನ. ನಿಮ್ಮ ಫಾರ್ಮಸ್ಯುಟಿಕಲ್ ಫ್ಯಾಕ್ಟರಿಯ ಮೇಲೆ **Enforcement Directrate**ನವರು ಹೆಲ್ತ್ ಡಿಪಾರ್ಟ್‌ಮೆಂಟ್‌ನವರು ಯಾವ ಗಳಿಗೆಯಲ್ಲಾದರೂ ದಾಳಿ ಮಾಡಬಹುದು. ಪಿಲ್ಸ್ ತಯಾರಿಕೆಯಲ್ಲಿ ನಾನು ಕೊಟ್ಟ ಫಾರ್ಮುಲಕ್ಕಿಂತಲೂ ತೀರಾ ಹೆಚ್ಚಾಗಿ **sildenafil citrate**ನ್ನು ಬಳಸುತ್ತಿರುವುದು ಪ್ರೂವ್ ಆಗಿದೆ. ಮುಂಬಯಿ ಕೊಳಗೇರಿಯಲ್ಲಿ ಹಾರ್ಟ್ ಅಟ್ಯಾಕ್‌ನಿಂದ ಸತ್ತವರ ಪರೀಕ್ಷೆಯಿಂದ ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ತಿಳಿದು ಹೋಗಿದೆ ಮತ್ತು ನಿಮ್ಮ ಟ್ಯಾಬ್ಲೆಟ್‌ಗಳು ಎಲ್ಲರ ಮನೆಯಲ್ಲೂ ಸ್ಟಾಕ್ ಇರುವುದು ಕೂಡ ಹೆಲ್ತ್ ಡಿಪಾರ್ಟ್‌ಮೆಂಟ್ ಶೋಧನೆಯಲ್ಲಿ ಪತ್ತೆಯಾಗಿದೆ. ನೀವು ತುಂಬಾ ಅಗ್ಗದ ಬೆಲೆಗೆ ಮಾರುತ್ತಿದ್ದರಿಂದ ಬೇರೆಯವರೆಲ್ಲ ನಿಮ್ಮ ವಿರುದ್ಧ ಆರೋಪ ಮಾಡಿದ್ದಾರೆ. ಅದು ಸತ್ಯ ಕೂಡ ಆಗಿದೆ. ರಾಘವ ಪಂತುಲು ಫೋನ್‌ಗೆ ಸಿಗುತ್ತಿಲ್ಲ...' ಫೋನ್ ಕಟ್ ಆಗಿತ್ತು.

ಜಾಸ್ಮಿನ್ ಉನ್ಮತ್ತಳಾಗಿ ನನ್ನನ್ನು ಹಾಸಿಗೆಯ ಮೇಲೆ ಎಳೆದು ಕೊಂಡಿದ್ದಳು. ಜಾಸ್ಮಿನ್ ದೇಹ ಸಿರಿಯ ಮುಂದೆ ನನ್ನ ಮನದಲ್ಲಿನ ಇತರೆ ಸಂಗತಿಗಳೆಲ್ಲ ಮಸುಕಾಗ ತೊಡಗಿದವು. ನಾನೂ ಜಾಸ್ಮಿನ್ ಪರಸ್ಪರ ತೀವ್ರವಾಗಿ ಆವರಿಸಿಕೊಳ್ಳ ತೊಡಗಿದೆವು.

---

## ಕೇಶವರೆಡ್ಡಿ ಹಂದ್ರಾಳ

ಕೃಷಿ ಹಿನ್ನೆಲೆಯ ಕುಟುಂಬದಿಂದ ಬಂದ ಹಂದ್ರಾಳರು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ಹಂದ್ರಾಳದವರು. 'ಹಂದ್ರಾಳ' ಅವರ ಮೊದಲ ಕಥಾಸಂಗ್ರಹ. 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳಾಗಿವೆ.

'ಒಕ್ಕಲ ಒನಪು', 'ಮರೆತ ಭಾರತ' ಅವರ ಜನಮೆಚ್ಚುಗೆ ಪಡೆದ ಪ್ರಬಂಧ ಸಂಕಲನಗಳಾಗಿವೆ. ಸಿನಿಮಾ, ಧಾರವಾಹಿಗಳಿಗೂ ಅವರು ಕಥೆ, ಸಂಭಾಷಣೆ ಬರೆದಿದ್ದಾರೆ. ಪ್ರಕಟಿತ ಪುಸ್ತಕಗಳು 15. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಬೆಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಉಪ ಆಯುಕ್ತರಾಗಿ ನಿವೃತ್ತರಾಗಿದ್ದು, ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.